**ಓ ಎಸ್ 145/2023 ಡಿಡಬ್ಲ್ಯೂ.5**

**ಸಾಕ್ಷಿಯನ್ನು ದಿಃ 12.06.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಟಿ ವಿ ವಕೀಲರಿಂದಃ**

ಹಣ ನೀಡಿ ಕ್ರಯಪತ್ರ ಬರೆಸಿಕೊಳ್ಳದೆ ಇದ್ದರೂ ಕ್ರಯದ ಕರಾರು ಪತ್ರ ಬರೆಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರಿದು ತನ್ನ ತಂದೆಯು ಯಜಮಾನರಾಗಿದ್ದ ಕಾರಣ ಕ್ರಯಪತ್ರ ಅಥವಾ ಕ್ರಯದ ಕರಾರು ಪತ್ರ ಬರೆಸಿಕೊಳ್ಳುವ ಬಗ್ಗೆ ಯಾವುದೇ ಮಾತುಕತೆ ಆಡಲು ಆಗಲಿಲ್ಲ ಎಂದು ಹೇಳುತ್ತಾರೆ. ನಮ್ಮ ತಂದೆಯು ಇದ್ದ ಕಾರಣ ನಾವು ಹಾಗೆ ಮಾತುಕತೆ ಆಡಲು ಆಗಲಿಲ್ಲ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಹೇಳಿದ್ದೇನೆ. ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಹೇಳದೆ ಇದ್ದರೂ ಸಹ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮೇಗೌಡರೇ ಒಂದು ಬದಿ ಮತ್ತು ನಾನು ಹಾಗೂ ಉಳಿದ ಸಹೋದರರು ಒಂದು ಬದಿ ಆಗಿರುವ ಕಾರಣ ನಾನು ನನ್ನ ಉಳಿದ ಸಹೋದರರ ಜೊತೆ ಷರೀಕ್ಕಾಗಿ ತಿಮ್ಮೇಗೌಡರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳೆಲ್ಲವೂ ಒಟ್ಟು ಕುಟುಂಬದ ಆಸ್ತಿಗಳಾಗಿರುವ ಕಾರಣ ನಮ್ಮಷ್ಟೇ ವಾದಿಗೂ ಸಹ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ವಾದಿ ಸಲ್ಲಿಸಿರುವ ಯಾವುದೇ ದಾಖಲೆಗಳಲ್ಲಿಯೂ ಸಹ ವಿಭಾಗ ಆಗಿದೆ ಎಂದು ತೋರಿಸುವಂತಹ ಯಾವುದೇ ಪದ ನಮೂದು ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**